ಬಂಟರ ಸಂಘ ಬೆಂಗಳೂರು
BUNTS' SANGHA BANGALORE
www.buntsanghablr.com

ಮಾರ್ಚ್ 2023 ಸಂಪುಟ 19
ಸಂಚಿಕೆ 03
ಸಂಚಿಕೆ ಬೆಲೆ ರೂ. 1/–

# ಸ್ನೇಹ ಚಿಂತನೆ

ಮಾಸ ಪತ್ರಿಕೆ




**Bunts Sangha R.N.S. Vidyaniketan Composite P.U College - Graduation Day**



**Campfire by Scouts students**

ಶ್ರದ್ಧಾಂಜಲಿ



ದಿ. ಡಾ. ಎಂ.ಟಿ. ರೈ
ಮಾಜಿ ಅಧ್ಯಕ್ಷರು, ಬಂಟರ ಸಂಘ ಬೆಂಗಳೂರು


324, Chord Road, Vijayanagara
Bengaluru - 560 040.
Ph: 080 2339 9323/ 2339 9635
E: info@buntsanghablr.com

# SPOWIN INTERNATIONAL















* CRICKET
* BADMINTON
* TENNIS
* SQUASH
* SOCCER
* BASKET BALL
* VOLLEY BALL
* THROW BALL
* APPARELS
* INDOOR GAMES
* FITNESS ACCESSORIES
* SPORTS ACCESSORIES
* CAROM BOARD
* TABLE TENNIS
* SKATING
* SWIMMING
* TROPHIES
* MEDALS & MOMENTOS

## ALL DAYS OPEN FROM 10 AM TO 9 PM

**SPOWIN** PLAY WITH CONFIDENCE

## ALL YOUR SPORTS & FITNESS NEEDS UNDER ONE ROOF

No. 5 Shree Arcade, 12th Cross, Ideal Home Township, Rajarajeshwari Nagar, Bangalore – 560098
Landmark Opp. to Watering Hole Restaurant. Contact 080-41148942 9663148064

YONEX, SG, CEAT, Wilson, NIVIA, LI-NING, SS, SF STANFORD, DUNLOP, COSCO, SPARTAN, MRF, adidas, VECTOR X, SPALDING, Babolat, DSC, GM, speedo, LYCOT, asics, STAG, bonjour, GKI, HEAD

Racket Stringing done in 1 hr



We accept all major credit and debit cards



**Free Home Delivery**
(*Terms & Conditions Apply)

We also undertake orders of Treadmills, all types of Fitness Equipments, and also supply of all types of Basket Ball Poles, Tennis Poles, Badminton Poles, Kabaddi Court, Badminton Court and Basket Ball Court, Multygyms for Schools, Colleges, Apartments & Software Companies.

**For more information Contact : SUREKHA. R. SHETTY : 9538113889**

You can also mail us @ spowininternational2021@gmail.com

# ಸ್ನೇಹ ಚಿಂತನೆ


*Monthly Magazine Published by*

**BUNTS' SANGHA BANGALORE**

**VOL 19** | **MARCH 2023** | **ISSUE 03**



**ಸಾಹಿತ್ಯ ಮತ್ತು ಪ್ರಕಾಶನ ಸಮಿತಿ**
ಚೇರ್‌ಪರ್ಸನ್ ಮತ್ತು ಗೌ॥ ಸಂಪಾದಕರು :
ಶ್ರೀ ಅರವಿಂದ ಶೆಟ್ಟಿ ಎಂ.

**ಸಹ ಸಂಪಾದಕರು :**
ಶ್ರೀ ಸತ್ಯಾನಂದ ಮೇಲಾಂಟ ಎನ್.

**ಸಂಪಾದಕ ಮಂಡಳಿ :**
ಶ್ರೀ ಸತೀಶ್ ಶೆಟ್ಟಿ ವಕ್ವಾಡಿ
ಶ್ರೀಮತಿ ಜಯಲಕ್ಷ್ಮೀ ಸಿ. ಶೆಟ್ಟಿ
ಶ್ರೀಮತಿ ಶ್ಯಾಮಲ ಶೆಟ್ಟಿ
ಶ್ರೀಮತಿ ನಿರ್ಮಲಾ ಸಿ. ರೈ
ಡಾ। ಶಾಲ್ಮಲೀ ಸುರೇಶ್
ಶ್ರೀ ರವೀಂದ್ರ ಶೆಟ್ಟಿ ಹಟ್ಟಿಯಂಗಡಿ
ಶ್ರೀಮತಿ ಆರತಿ ಸುರೇಶ್ ಶೆಟ್ಟಿ
ಶ್ರೀಮತಿ ಅನುಷಾ ಶೆಟ್ಟಿ
ಶ್ರೀ ಪ್ರದೀಪ್ ಕುಮಾರ್ ಹೆಗ್ಡೆ
ಶ್ರೀ ಜಯರಾಮ ಶೆಟ್ಟಿ, ನೂಜಾಡಿ
ಶ್ರೀ ಪ್ರಕಾಶ್ ರೈ
ಶ್ರೀ ಪ್ರದೀಪ್‌ರಾಜ್ ಶೆಟ್ಟಿ

**ಪೋಷಕ ಸದಸ್ಯರು :**
ಶ್ರೀಮತಿ ಮನೋರಮ ಚೌಟ
ಶ್ರೀಮತಿ ವೇದ ಎಸ್. ಶೆಟ್ಟಿ
ಶ್ರೀ ಬಿ. ಕುಸುಮಾಕರ ಶೆಟ್ಟಿ
ಶ್ರೀ ಆರ್.ಎಸ್. ಶೆಟ್ಟಿ
ಶ್ರೀಮತಿ ವಸಂತಿ ಪಿ. ಶೆಟ್ಟಿ
ಶ್ರೀ ಪ್ರಕಾಶ್ ಶೆಟ್ಟಿ
ಶ್ರೀ ಎ.ಜೆ. ಶೆಟ್ಟಿ
ಶ್ರೀಮತಿ ಗೀತ ಭಗವಾನ್‌ದಾಸ್ ರೈ
ಶ್ರೀ ಕೆ. ಶಂಕರ್ ಶೆಟ್ಟಿ ಹುಬ್ಬಳ್ಳಿ
ಶ್ರೀ ಶ್ರೀನಿವಾಸ ಸೂಡ

**ಪ್ರಕಾಶಕರು :**
ಶ್ರೀ ಆನಂದರಾಮ ಶೆಟ್ಟಿ ಬಿ.



ಈ ಸಂಚಿಕೆಯಲ್ಲಿ ಪ್ರಕಟವಾದ ಲೇಖನಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದ್ದು, ಇದರಲ್ಲಿ ಬಂಟರ ಸಂಘಕ್ಕೆ ಯಾವುದೇ ತೆರನಾದ ಜವಾಬ್ದಾರಿ ಇರುವುದಿಲ್ಲ. **– ಸಂಪಾದಕ ಮಂಡಳಿ**


## ಒಳ ಪುಟಗಳಲ್ಲಿ.....


| | ಪುಟ |
|---|---|
| ಸಂಪಾದಕೀಯ | 2 |
| ಅಧ್ಯಕ್ಷರ ಮಾತು | 3 |
| ಗೌರವ ಕಾರ್ಯದರ್ಶಿಗಳ ವರದಿ | 4 |
| Report on BSRNSV Graduation Day | 11 |
| Report on BSRNSV ICSE Primary Annual Day | 12–13 |
| ಭಾಗವತಿಕೆಗೆ ಮಂಗಳ ಹಾಡಿದ ಬಲಿಪ ನಾರಾಯಣ ಭಾಗವತರು | 14 |
| ಬೆಂಗಳೂರು ಬಂಟರ ಸಂಘದ ಮಾಜಿ ಅಧ್ಯಕ್ಷರಾದ ಡಾ. ಎಂ. ತಿಮ್ಮಪ್ಪ ರೈಯವರಿಗೆ ನುಡಿನಮನ | 15 |
| Gender Equality – A Myth or Reality | 16–17 |
| ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ | 18–19 |
| ಡಾ. ಎಂ. ಟಿ. ರೈ ಇನ್ನಿಲ್ಲ | 20–21 |


**ಮುಖ ಪುಟ**

Bunts Sangha R.N.S. Vidyaniketan Composite P.U College - Graduation Day

Campfire by Scouts students

ಶ್ರದ್ಧಾಂಜಲಿ – ದಿ. ಡಾ॥ ಎಂ.ಟಿ. ರೈ ಮಾಜಿ ಅಧ್ಯಕ್ಷರು, ಬಂಟರ ಸಂಘ, ಬೆಂಗಳೂರು

# ಸಂಪಾದಕೀಯ



ಹೆಣ್ಣಿನಿಂದಲೇ ಇಹವು। ಹೆಣ್ಣಿನಿಂದಲೇ ಪರವು
ಹೆಣ್ಣಿಂದಲೇ ಸಕಲ ಸಂಪದವು
ಹೆಣ್ಣೊಲ್ಲದಣ್ಣಗಳು ಯಾರು ಸರ್ವಜ್ಞ॥

ಹೆಣ್ಣು ಸೃಷ್ಟಿಯ ಮೂಲ. ಈಕೆ ವಿಶಿಷ್ಠ ಶಕ್ತಿಗಳ ಸಂಗಮ. ಮಮತೆ, ಕರುಣೆ, ವಾತ್ಸಲ್ಯ ಹಾಗೂ ತಾಳ್ಮೆಗಳೇ ಈಕೆಯ ಪ್ರಬಲ ಶಕ್ತಿ. ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಸ್ತ್ರೀಗೆ ಅವಳದೇ ಆದ ಗೌರವ ಸ್ಥಾನಮಾನಗಳವೆ. ಮಾರ್ಚ್ ೮ ಮಹಿಳೆಯರ ದಿನ. ಆಕೆಯ ಸಾಧನೆ, ತ್ಯಾಗ, ಕಾರ್ಯಗಳನ್ನು ಮೆಚ್ಚಿ ಗೌರವಿಸುವ ದಿನ. ಸ್ತ್ರೀ ಅಬಲೆ ಹಾಗೂ ಅಸಮರ್ಥಳಲ್ಲ. ಎಲ್ಲಾ ಕ್ಷೇತ್ರಗಳಲ್ಲೂ ಪುರುಷರಷ್ಟೇ ಧೀಮಂತಿಕೆಯಿಂದ, ಸ್ವಾಭಿಮಾನದಿಂದ ದುಡಿಯುವ ಕ್ಷಮತೆ ಆಕೆಗಿದೆ.

ಕಲೆ, ಸಾಹಿತ್ಯ, ವೈಜ್ಞಾನಿಕ, ವೈದ್ಯಕೀಯ, ಸಾಮಾಜಿಕ, ರಾಜಕೀಯ, ಕ್ರೀಡೆ ಹೀಗೆ ಎಲ್ಲಾ ಕ್ಷೇತ್ರಗಳಲ್ಲೂ ತನ್ನ ಛಾಪು ಮೂಡಿಸುವ ಮೂಲಕ ಜಗತ್ತಿನ ದೃಷ್ಟಿಯನ್ನು ತನ್ನತ್ತ ಸೆಳೆದಿದ್ದಾಳೆ. ಅಲ್ಲದೇ ವಿಶ್ವ ಗೌರವಕ್ಕೆ ಪಾತ್ರಳಾಗಿದ್ದಾಳೆ.

ಬಾಹ್ಯಾಕಾಶ ಸಾಧನೆ ಮಾಡಿದ ಭಾರತದ ಪ್ರಥಮ ಮಹಿಳೆ ಕಲ್ಪನಾ ಚಾವ್ಲಾ, ಐಪಿಎಸ್ ಸಾಧನೆ ಮಾಡಿದ ಕಿರಣ್ ಬೇಡಿ, ಸುಧಾಮೂರ್ತಿ, ಸರೋಜಿನಿ ನಾಯ್ಡು, ಸಾಲುಮರದ ತಿಮ್ಮಕ್ಕ ಹೀಗೆ ಹತ್ತು ಹಲವು ಮಹಿಳೆಯರು ತಮ್ಮ ವೃತ್ತಿನಿಷ್ಠೆ, ನಿಸ್ವಾರ್ಥತೆ, ಸಾಮರ್ಥ್ಯಗಳಿಂದ ಅನೇಕ ಸವಾಲುಗಳನ್ನು ಎದುರಿಸಿ ಸಾಧನೆಯ ಮುಕುಟ ಧರಿಸಿದ್ದಾರೆ.

ಇವರ್‍ಯಾರು ಶ್ರೀಮಂತ ಕುಟುಂಬದಿಂದಲೋ, ಶಿಫಾರಸ್ಸಿನಿಂದಲೋ ಬಂದವರಲ್ಲ. ಬಾಲ್ಯದಿಂದ ಅವರು ಕಂಡ ಕನಸು ಅವರೊಳಗಿನ ಮಹತ್ವಾಕಾಂಕ್ಷೆಯ ತುಡಿತ, ಗುರಿ ಸಾಧನೆಯ ಹಠ ಹಾಗೂ ಮುಖ್ಯವಾಗಿ ಅದಕ್ಕೆ ನೀರೆರೆದ ಪೋಷಕರು, ಸಂಬಂಧಿಕರು ಹಾಗೂ ಸಮಾಜದ ಪ್ರೋತ್ಸಾಹ ಅವರ ಕನಸನ್ನು ನನಸಾಗಿಸಿದೆ.

ನಾವು 21ನೇ ಶತಮಾನದಲ್ಲಿದ್ದರೂ ಎಲ್ಲಾ ಕ್ಷೇತ್ರಗಳಲ್ಲೂ ಮುಂದುವರಿದಿದ್ದರೂ ಅನೇಕ ಭಾಗಗಳಲ್ಲಿ ಮಹಿಳೆಯರು ನಿರ್ಭೀತಿಯಿಂದ ಸ್ವತಂತ್ರವಾಗಿ ಬದುಕಲು ಸಾಧ್ಯವಾಗುತ್ತಿಲ್ಲ. ಆಕೆಯ ದೌರ್ಜನ್ಯ, ಶೋಷಣೆ ಇನ್ನೂ ನಿಂತಿಲ್ಲ. ಸಮಾಜದಲ್ಲಿ ಇಂತಹ ಸಮಸ್ಯೆಗಳಿಗೆ ಕೊನೆಯಿಲ್ಲ. ಆದರೆ ಸ್ತ್ರೀಗೆ ಇವುಗಳನ್ನೆಲ್ಲ ಸಮರ್ಪಕವಾಗಿ ಎದುರಿಸುವ ನೈತಿಕ ಬೆಂಬಲ ಹಾಗೂ ಸರಿಯಾದ ಶಿಕ್ಷಣದ ಅಗತ್ಯವಿದೆ. ಇಂದಿನ ಮಹಿಳೆಯರಲ್ಲಿ ಕಾನೂನು, ಕಟ್ಟಳೆಗಳ ಸರಿಯಾದ ಮಾಹಿತಿ ಅರಿವು ಇದೆ. ಯಾವುದೇ ಘಟನೆಯನ್ನು ಧೈರ್ಯದಿಂದ ಪ್ರಶ್ನಿಸುವ ಮನೋಭಾವ ಹೆಚ್ಚುತ್ತಿದೆ.

ಈ ಸ್ಪರ್ಧಾತ್ಮಕ ಸಮಾಜಕ್ಕೆ ತಕ್ಕಂತೆ ಹೆಣ್ಣು ಮಕ್ಕಳು ದೃಢಚಿತ್ತದಿಂದ ತಮ್ಮ ಕನಸಿನೆಡೆಗೆ ಸಾಗುವಲ್ಲಿ ಪ್ರಯತ್ನಶೀಲರಾಗಿದ್ದಾರೆ. ಶಿಕ್ಷಣದ ಹಕ್ಕು ಆಕೆಗೆ ಆತ್ಮಾವಿಶ್ವಾಸ, ಛಲ, ಮನೋಬಲ ಹಾಗೂ ಯಾವುದೇ ಕ್ಲಿಷ್ಟ ಪರಿಸ್ಥಿತಿಯನ್ನು ಎದುರಿಸುವ ಮನೋಧೈರ್ಯ ನೀಡಬೇಕಿದೆ. ಅಂತಹ ಶಿಕ್ಷಣ ವ್ಯವಸ್ಥೆ ನಮ್ಮದಾಗಬೇಕಿದೆ.

ತಮ್ಮ ಮಕ್ಕಳ ಕನಸನ್ನು ನಿರ್ಲಕ್ಷಿಸಿ, ನಮ್ಮ ಕನಸನ್ನು ಅವರ ಮೇಲೆ ಹೇರುವ ಬದಲು ಅವರ ಕನಸಿಗೆ ನಾವು ರೆಕ್ಕೆಯಾಗೋಣ ಅವರ ಗುರಿ ಸಾಧನೆಗೆ ಮೆಟ್ಟಿಲಾಗೋಣವಲ್ಲವೇ?

ಈ ಹಿಂದೆ ಸಾಹಿತ್ಯ ಮತ್ತು ಪ್ರಕಾಶನ ಸಮಿತಿಯ ಚೇರ್‌ಪರ್ಸನ್‌ರಾಗಿದ್ದು ಹಾಗೂ ಪ್ರಸ್ತುತ ಸಲಹೆಗಾರರಾಗಿ ಸೇವೆ ಸಲ್ಲಿಸುತ್ತಿರುವ ಶ್ರೀ ಸತ್ಯಾನಂದ ಮೇಲಾಂಟರವರನ್ನು ಪ್ರಸಕ್ತ ಸಾಲಿಗೆ ಸಹಸಂಪಾದಕರನ್ನಾಗಿ ನೇಮಿಸಲಾಗಿದೆ ಎಂದು ತಿಳಿಸಲು ಸಂತೋಷ ಪಡುತ್ತಿದ್ದೇನೆ.

**ಅರವಿಂದ ಶೆಟ್ಟಿ ಎಂ.**

# ಅಧ್ಯಕ್ಷರ ಮಾತು



ಮಾರ್ಚ್ ತಿಂಗಳಿನಲ್ಲಿ ಕೆಲವೊಂದು ವಿಶೇಷ ದಿನಗಳನ್ನು ನಾವು ಆಚರಿಸುತ್ತೇವೆ. ಹೋಳಿ ಕಾಮದಹನ, ಬಣ್ಣದ ಹಬ್ಬದ ಆಚರಣೆ, ವಿಶ್ವ ಮಹಿಳಾ ದಿನಾಚರಣೆ ಮಾರ್ಚ್ 8ರಂದು ಹಾಗೂ ಚಾಂದ್ರಮಾನ ಯುಗಾದಿ. ನಮ್ಮ ಬಂಟ ಸಮಾಜದವರು ಸೌರಮಾನ ಯುಗಾದಿ ಏಪ್ರಿಲ್ 14-15ರಂದು ಆಚರಿಸುತ್ತಾರೆ. ಹಾಗೆಯೇ ಪ್ರತೀ ವರ್ಷದಂತೆ ಬೆಂಗಳೂರು ಬಂಟರ ಸಂಘದಿಂದ ಬಿಸು (ಯುಗಾದಿ) ಆಚರಣೆ ಏಪ್ರಿಲ್ 14ರಂದು ಬಹಳ ಸಡಗರದಿಂದ ವಿಶೇಷ ಆಕರ್ಷಣೀಯ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಜರುಗಲಿದೆ. ಈ ನಿಟ್ಟಿನಲ್ಲಿ ಈಗಾಗಲೇ ಸಾಂಸ್ಕೃತಿಕ ಸಮಿತಿ ಚೇರ್‌ಪರ್ಸನ್ ಶ್ರೀಮತಿ ಜಯಶ್ರೀ ಸಿ. ರೈ, ಸಂಚಾಲಕರಾದ ಶ್ರೀ ಮಹೇಶ್ ಶೆಟ್ಟಿ ಬೈಲೂರು ಹಾಗೂ ಸಮಿತಿಯ ಎಲ್ಲಾ ಸದಸ್ಯರು ಕಾರ್ಯ ಪ್ರವೃತ್ತರಾಗಿದ್ದಾರೆ.

ವಿಶ್ವ ಮಹಿಳಾ ದಿನಾಚರಣೆ ಬಹಳ ಮಹತ್ವದಾಗಿರುವುದರಿಂದ ಪ್ರತೀ ವರ್ಷದಂತೆ ಈ ವರ್ಷವೂ ಸಂಘದಲ್ಲಿ ಮಾರ್ಚ್ 11ರಂದು ಜರುಗಿತು. ಈ ಸುಂದರ ಕಾರ್ಯಕ್ರಮವನ್ನು ಮಹಿಳಾ ವಿಭಾಗದ ಚೇರ್‌ಪರ್ಸನ್‌ರಾದ ಶ್ರೀಮತಿ ಮಾಲತಿ ಜೆ. ಶೆಟ್ಟಿ, ಸಂಚಾಲಕಿ ಶ್ರೀಮತಿ ವಿಜಯಲಕ್ಷ್ಮಿ ಎಸ್. ಶೆಟ್ಟಿ ಮತ್ತು ಸಮಿತಿಯ ಎಲ್ಲಾ ಸದಸ್ಯರು ಬಹುದಿನದ ಪರಿಶ್ರಮದಿಂದ ಯಶಸ್ವಿಯಾಗಿ ನಡೆಸಿಕೊಟ್ಟರು. ಸಂಘದ ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ಸಂಘದ ಬಹಳ ಮಂದಿ ಸದಸ್ಯರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡರು. ಸಂಘದ ಮಹಿಳಾ ವಿಭಾಗದ ಸರ್ವಸದಸ್ಯರಿಗೆ ಅನಂತ ಅಭಿನಂದನೆಗಳು.

ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನದ I ಮತ್ತು II ರ ಎಲ್ಲಾ ತರಗತಿಗಳ ದಾಖಲಾತಿ, ಅಧ್ಯಾಪಕರ ಆಯ್ಕೆ ಪ್ರಕ್ರಿಯೆ ಹಾಗೂ ಹೊಸ ಶೈಕ್ಷಣಿಕ ವರ್ಷದ ತಯಾರಿ ಬಹಳ ಅಚ್ಚುಕಟ್ಟಾಗಿ ನಡೆಯುತ್ತಿದೆ. ತಿಂಗಳ ಅಖೇರಿಯಲ್ಲಿ ನಡೆಯುವ ಪರೀಕ್ಷೆಗಳ ತಯಾರಿ ನಡೆಯುತ್ತಿದೆ. ಈಗಾಗಲೇ ಕೆಲವೊಂದು ಪರೀಕ್ಷೆಗಳು ನಡೆದಿವೆ. ಉತ್ತಮ ಫಲಿತಾಂಶದ ಭರವಸೆಯೊಂದಿಗೆ ಶಾಲಾ ಶಿಕ್ಷಕ ತಂಡ ಹಾಗೂ ನಾವು ಎಲ್ಲಾ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಶುಭ ಹಾರೈಸುತ್ತಿದ್ದೇವೆ. ಹಾಗೆಯೇ ಬರುವ ಶೈಕ್ಷಣಿಕ ವರ್ಷಕ್ಕೆ ಬೇಕಾಗುವ ಪೀಠೋಪಕರಣಗಳು ಹಾಗೂ ಇತರ ಅಗತ್ಯತೆಗಳ ಬಗ್ಗೆ ಗಮನ ಹರಿಸಿ, ಸಮಯಕ್ಕೆ ಸರಿಯಾಗಿ ಇತರ ಎಲ್ಲಾ ಕೆಲಸಗಳನ್ನು ಮಾಡಲಾಗುತ್ತಿದೆ.

ಶಾಲೆಯಿಂದ ಕೆಲವೊಂದು ಕಾರ್ಯಕ್ರಮಗಳು ಸುಂದರವಾಗಿ ಮೂಡಿ ಬಂದಿವೆ. ಕ್ರೀಡಾ ದಿವಸ, ಸ್ಪರ್ಧೆ, ಪ್ರೈಮರಿ ವಿಭಾಗದ ವಾರ್ಷಿಕೋತ್ಸವ ಇತ್ಯಾದಿ ಕಾರ್ಯಕ್ರಮಗಳು ನಡೆದು ಮಕ್ಕಳು ಹಾಗೂ ಪೋಷಕರಿಗೆಲ್ಲರಿಗೂ ಸಂತಸವನ್ನುಂಟು ಮಾಡಿದೆ.

ಸಂಘದ ಪ್ರಸ್ತುತ ಪದಾಧಿಕಾರಿಗಳು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರ ಆಡಳಿತ ತಂಡ ಕಾರ್ಯಪ್ರವೃತ್ತರಾಗಿ ಇದೀಗ 7 ತಿಂಗಳು ಕಳೆದಿವೆ. ಹೊಸ ಯೋಜನೆಗಳ ಬಗ್ಗೆ ಸಾಕಷ್ಟು ಚಿಂತನೆ, ಚರ್ಚೆ ನಡೆದಿವೆ. ಇದಕ್ಕೆ ಪೂರಕವಾದ ಕೆಲವೊಂದು ಕೆಲಸಗಳು ನಡೆದಿವೆ. ಇದೆಲ್ಲದರ ಬಗ್ಗೆ ನಿರ್ದಿಷ್ಟವಾದ ಚಿತ್ರಣ ನಮ್ಮ ಮುಂದೆ ಬಂದ ಕೂಡಲೇ ಸದಸ್ಯರಿಗೆ ತಿಳಿಸಲಾಗುವುದು. ಅತ್ಯಂತ ಶೀಘ್ರದಲ್ಲಿ ಯೋಜನೆ ಪ್ರಾರಂಭಗೊಳ್ಳಲಿದೆ. ಸದಸ್ಯರೆಲ್ಲರ ಸಹಾಯವನ್ನು ಕೂಡಾ ನಾವು ಬಯಸುತ್ತಿದ್ದೇವೆ.

ಆರ್ಥಿಕ ವರ್ಷ ಈ ತಿಂಗಳಲ್ಲಿ ಕೊನೆಗೊಳ್ಳಲಿದೆ. ತಮ್ಮ ತಮ್ಮ ಕೆಲಸಗಳಲ್ಲಿ, ಉದ್ಯಮಗಳಲ್ಲಿ ಸದಸ್ಯರೆಲ್ಲರೂ ತಮ್ಮನ್ನು ತೊಡಗಿಸಿಕೊಂಡು ಇಡೀ ವರ್ಷ ಮಾಡಿದ ಲೆಕ್ಕ ಪತ್ರಗಳನ್ನು ಮುಗಿಸುವ ಸಮಯ ಹಾಗೂ ಪ್ರಸಕ್ತ ವರ್ಷದ ಆಗುಹೋಗುಗಳ ಬಗ್ಗೆ ಆತ್ಮಾವಲೋಕನ.... ಹೀಗೆ ಮಾರ್ಚ್ ತಿಂಗಳ ಅಂತ್ಯದ ಒಂದು ದೃಶ್ಯ. ಮುಂದಿನ ಆರ್ಥಿಕ ವರ್ಷ ಎಲ್ಲರಿಗೂ ಲಾಭದಾಯಕ ಹಾಗೂ ಹರ್ಷದಾಯಕವಾಗಿರಲಿ ಎಂದು ಹಾರೈಸುತ್ತಾ ಸರ್ವ ಸದಸ್ಯರಿಗೂ ಶ್ರೀ ವರಸಿದ್ಧಿ ವಿನಾಯಕನ ಆಶೀರ್ವಾದ ಇರಲಿ ಎಂದು ಬೇಡಿಕೊಳ್ಳುತ್ತಿದ್ದೇನೆ.

**ಎಂ. ಮುರಲೀಧರ ಹೆಗ್ಡೆ**
ಅಧ್ಯಕ್ಷರು
hegdemm@gmail.com

# ಗೌರವ ಕಾರ್ಯದರ್ಶಿಗಳ ವರದಿ



**ಮಾನ್ಯ ಸದಸ್ಯ ಬಾಂಧವರೇ,**

ಸರಳತೆಯ ಪ್ರತೀಕ, ಸಮುದಾಯ ಪ್ರೇಮಿ, ಪಶು ವೈದ್ಯಕೀಯ ವಿಶ್ವವಿದ್ಯಾಲಯ, ಹೆಬ್ಬಾಳ ಬೆಂಗಳೂರು ಇದರ ನಿವೃತ್ತ ಪ್ರಾಧ್ಯಾಪಕರು ಮತ್ತು ವಿಭಾಗ ಮುಖ್ಯಸ್ಥರು ಹಾಗೂ ಬೆಂಗಳೂರು ಬಂಟರ ಸಂಘದ ಮಾಜಿ ಅಧ್ಯಕ್ಷರಾದ ಡಾ. ಎಂ. ಟಿ. ರೈಯವರು ನಿಧನದ ಪ್ರಯುಕ್ತ ದಿನಾಂಕ 03.03.2023 ರಂದು ಸಂಘದ ಸಭಾಭವನದಲ್ಲಿ **'ನುಡಿ ನಮನ'** ಕಾರ್ಯಕ್ರಮವನ್ನು ಆಯೋಜಿಸಿ, ಮೃತರ ಗೌರವಾರ್ಥ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಸಂಘದ ಮಾಜಿ ಅಧ್ಯಕ್ಷರುಗಳು, ಮಾಜಿ ಪದಾಧಿಕಾರಿಗಳು, ಮಾಜಿ ಕಾರ್ಯಕಾರಿ ಸಮಿತಿ ಸದಸ್ಯರು ಉಪಸ್ಥಿತರಿದ್ದು ಹಿರಿಯ ಚೇತನಕ್ಕೆ ಗೌರವ ನಮನ ಸಲ್ಲಿಸಲಾಯಿತು. ಸಂಘ ಆರಂಭದಿಂದಲೂ ಓರ್ವ ಉತ್ಸಾಹಿ ಸದಸ್ಯರಾಗಿ, ಕಾರ್ಯಕರ್ತರಾಗಿ, ಕಾರ್ಯಕಾರಿ ಸಮಿತಿ ಸದಸ್ಯರಾಗಿ ಸಂಘವನ್ನು ಕಟ್ಟಿ ಬೆಳೆಸುವಲ್ಲಿ ಡಾ. ಎಂ. ಟಿ. ರೈಯವರ ಸೇವೆ ಗುರುತರವಾದುದು. ಸಂಘದ ಸಂಕೀರ್ಣದಲ್ಲಿ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರವನ್ನು ಸ್ಥಾಪಿಸುವಲ್ಲಿ ದಿ. ಡಾ. ಎಂ. ತಿಮ್ಮಪ್ಪ ರೈಯವರ ಕೊಡುಗೆಯನ್ನು ನಾವೆಂದಿಗೂ ಮರೆಯುವಂತಿಲ್ಲ. ತನ್ನ ಹುಟ್ಟೂರು ಹಾಗೂ ಬಂಟ ಸಮುದಾಯದ ಬಗ್ಗೆ ಅತ್ಯಂತ ಅಭಿಮಾನವನ್ನು ಹೊಂದಿ, ಓರ್ವ ಮಾದರಿ ವ್ಯಕ್ತಿಯಾಗಿದ್ದ ಹಿರಿಯ ಚೇತನ ದಿ. ಡಾ. ಎಂ. ಟಿ. ರೈಯವರಿಗೆ ಸಮಸ್ತ ಬಂಟ ಸಮುದಾಯದ ಪರವಾಗಿ ಶ್ರದ್ಧಾಂಜಲಿ.

ದಿನಾಂಕ 03.02.2023 ರಂದು ಬಂಟರ ಸಂಘ ಆರ್. ಎನ್.ಎಸ್. ವಿದ್ಯಾನಿಕೇತನ I ಮತ್ತು II ವಿದ್ಯಾಸಂಸ್ಥೆಯ 10ನೇ ತರಗತಿ ಹಾಗೂ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ **'ಗ್ರಾಜುಯೇಶನ್ ಡೇ'** ಕಾರ್ಯಕ್ರಮದಲ್ಲಿ ಕಿದ್ವಾಯಿ ಸ್ಮಾರಕ ಗ್ರಂಥಿ ಸಂಸ್ಥೆಯ ಮಾಜಿ ನಿರ್ದೇಶಕರಾದ ಡಾ. ಸಿ. ರಾಮಚಂದ್ರ ಇವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಅಖಿಲ ಅಮಿತ್ ಶೆಟ್ಟಿಯವರಿಂದ ಮಹಿಳೆಯರಿಗಾಗಿ **'ಯೋಗ ಮತ್ತು ಧ್ಯಾನ'** ಕಾರ್ಯಕ್ರಮವನ್ನು ಆಯೋಜಿಸಿದ್ದ ಮಹಿಳಾ ವಿಭಾಗದ ಚೇರ್‌ಪರ್ಸನ್ ಶ್ರೀಮತಿ ಮಾಲತಿ ಜೆ. ಶೆಟ್ಟಿ, ಸಂಚಾಲಕಿ ಶ್ರೀಮತಿ ವಿಜಯಲಕ್ಷ್ಮಿ ಶೆಟ್ಟಿ ಕೊಡ್ಲಾಡಿ ಮತ್ತು ತಂಡಕ್ಕೆ ಅಭಿನಂದನೆಗಳು. ಮಹಿಳಾ ವಿಭಾಗದ ವತಿಯಿಂದ ದಿನಾಂಕ 11.03.2023 ರಂದು ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಪ್ರಯುಕ್ತ **'ಸ್ತ್ರೀ ಪರ್ವ'** ಎನ್ನುವ ವಿಶೇಷ ಕಾರ್ಯಕ್ರಮವನ್ನು ಹಾಗೂ ದಿನಾಂಕ 02.04.2023 ರಂದು ವಿವಾಹ ವೇದಿಕೆಯ ವತಿಯಿಂದ ಕಂಕಣಭಾಗ್ಯ ಎನ್ನುವ ಉಚಿತ ವಿವಾಹ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಸಮುದಾಯದ ಆರ್ಥಿಕವಾಗಿ ಹಿಂದುಳಿದ ಮದುವೆ ನಿಶ್ಚಯಗೊಂಡ ವಧೂ-ವರರು ಈ ಯೋಜನೆಯ ಸದುಪಯೋಗವನ್ನು ಪಡೆದುಕೊಳ್ಳಬೇಕಾಗಿ ವಿನಂತಿ.

ಸಂಘದ ಸೇವಾದಳ ಸಮಿತಿಯ ವತಿಯಿಂದ ಮದುವೆ ಮೊದಲಾದ ಕಾರ್ಯಕ್ರಮಗಳಲಿ ಉಳಿದ ಹೆಚ್ಚುವರಿ ಆಹಾರವನ್ನು ವೃದ್ಧಾಶ್ರಮ ಹಾಗೂ ಅನಾಥಾಶ್ರಮಗಳಿಗೆ ತಲುಪಿಸುವ ವಿನೂತನ ಪರಿಕಲ್ಪನೆಯನ್ನು ಜಾರಿಗೆ ತಂದಿದ್ದು, ತಾವೆಲ್ಲರೂ ಈ ಯೋಜನೆಗೆ ಸಹಕರಿಸಬೇಕಾಗಿ ವಿನಂತಿ. ಹೆಚ್ಚಿನ ವಿವರಗಳನ್ನು ಈ ಸಂಚಿಕೆಯಲ್ಲಿ ನೀಡಲಾಗಿದೆ. ಸಂಘದ ಸದಸ್ಯಬಾಂಧವರು ನಿಧನರಾದ ಸಂದರ್ಭದಲ್ಲಿ ಸೇವಾದಳದ ವತಿಯಿಂದ ಮೃತರ ಅಂತ್ಯಕ್ರಿಯೆ ವಿಧಿ-ವಿಧಾನ ನೆರವೇರಿಸಲು ಅಗತ್ಯ ಸಹಕಾರ ನೀಡುತ್ತಿದೆ. ಹೆಚ್ಚು-ಹೆಚ್ಚು ಸಮಾಜಮುಖಿ ಕಾರ್ಯಚಟುವಟಿಕೆಗಳನ್ನು ಕಾರ್ಯಗತಗೊಳಿಸುತ್ತಿರುವ ಸೇವಾದಳ ಸಮಿತಿಯ ಚೇರ್‌ಪರ್ಸನ್ ಶ್ರೀ ಉಮೇಶ್ ಕುಮಾರ್ ಶೆಟ್ಟಿ, ಸಂಚಾಲಕರಾದ ಶ್ರೀ ಸತೀಶ್ ಶೆಟ್ಟಿ ವಾಲ್ಪೂರು ಹಾಗೂ ತಂಡಕ್ಕೆ ಅಭಿನಂದನೆಗಳು. ಸಂಘದ ಸಂಕೀರ್ಣ ನಿರ್ವಹಣಾ ಸಮಿತಿಯ ಉಸ್ತುವಾರಿಯಲ್ಲಿ ಸಂಘದ ಸಂಕೀರ್ಣ ಹಾಗೂ ಹಾಸ್ಟೆಲನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತಿರುವ ಸಮಿತಿಯ ಚೇರ್‌ಪರ್ಸನ್ ಶ್ರೀ ಸಂದೀಪ್ ಕುಮಾರ್ ಶೆಟ್ಟಿ, ಸಂಚಾಲಕರಾದ ಶ್ರೀ ರಾಮದಾಸ್ ಶೆಟ್ಟಿ ಮತ್ತು ತಂಡಕ್ಕೆ ಅಭಿನಂದನೆಗಳು.

ಬಂಟರ ಸಂಘ ಆರ್.ಎನ್.ಎಸ್. ವಿದ್ಯಾಸಂಸ್ಥೆಯಲ್ಲಿ ಅಡ್ಮಿಶನ್ ಪ್ರಕ್ರಿಯೆ ನಡೆಯುತ್ತಿದ್ದು, ಹೊಸದಾಗಿ ದಾಖಲಾಗುವ ಹಾಗೂ ಪ್ರಸ್ತುತ ಶಿಕ್ಷಣ ಪಡೆಯುತ್ತಿರುವ ಬಂಟ ವಿದ್ಯಾರ್ಥಿಗಳಿಗೆ ಬೋಧನಾ ಶುಲ್ಕವನ್ನು ಮಾತ್ರವೇ ಪಡೆಯುತ್ತಿದ್ದು, ಯಾವುದೇ ಡೊನೇಶನ್ ಪಡೆಯಲಾಗುತ್ತಿಲ್ಲ. ಹಾಗೆಯೇ ಅಗತ್ಯವಿರುವ ಪೋಷಕರಿಗೆ ಅವರ ಲಿಖಿತ ಮನವಿಯ ಮೇರೆಗೆ ಎರಡನೇ ಕಂತಿನ ಶುಲ್ಕ ವಿನಾಯಿತಿಗೆ ಸಹ ಅವಕಾಶ ಕಲ್ಪಿಸಲಾಗಿದೆ.

ಆದ್ದರಿಂದ ಆರ್ಥಿಕವಾಗಿ ಸದೃಢರಾಗಿರುವ ಪೋಷಕ ಬಾಂಧವರು ತಮ್ಮ ಮಕ್ಕಳ ಸಂಪೂರ್ಣ ಶುಲ್ಕವನ್ನು ಪಾವತಿಸುವ ಮೂಲಕ ಆರ್ಥಿಕವಾಗಿ ಅತ್ಯಂತ ಹಿಂದುಳಿದ ಅರ್ಹ ಬಂಟ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ಕಲ್ಪಿಸಿ ಅವರ ಶಿಕ್ಷಣಕ್ಕೆ ನೆರವಾಗಲು ನಮ್ಮೊಂದಿಗೆ ಕೈಜೋಡಿಸಬೇಕಾಗಿ ನಮ್ರತೆಯಿಂದ ಕೇಳಿಕೊಳ್ಳುತ್ತಿದ್ದೇನೆ.

ಇಂತಿ ತಮ್ಮ ಪ್ರೀತಿಯ,

**ಬಿ. ಆನಂದರಾಮ ಶೆಟ್ಟಿ**

**ಗೌರವ ಕಾರ್ಯದರ್ಶಿ**

Shree Durgaparameshwari Educational Trust (Regd.)

College Code: AS1005

# J S Pre-University College

(Recgd. by Govt. of Karnataka)

# J S Degree College

(Affiliated to Bangalore University)

# 198, Balagangadhar Nagar, Kengunte, Near Dr. Ambedkar Engg.College Signal,
Mallathahalli, Bengaluru - 560 056. Ph: 080-23218381 ; M: 8884666558
E-mail: info@jspuc.com | Website: www.jspuc.com




"We ensure academic excellence and discipline"

*"An institution with the determination and commitment to materialize the desired objectives through brilliant academic brains".*

## COURSES OFFERED

**PUC - SCIENCE:** P C M B, P C M Cs., P C M E

**PUC - COMMERCE:** B A S Cs., E B A Cs., E B A S

**Languages:** English, Kannada, Hindi, Sanskrit

**Facilities:**
CET / NEET / JEE / KVPY / NATA / CA - Foundation, IAS Integrated

**Degree Courses:** B.Com, BBA, BCA




**Enrol Now**
E-mail: info@jspuc.com | Website: www.jspuc.com

## Our First Batch of II PUC Annual Exam Results: 2022 State Rank Holders



**Madhushree S. Shetty**
PCMB: Total - 589 (98.16%)
Phy: 100 ; Maths: 100 ; Chem: 99
Bio: 99 ; Kan: 99 ; Eng: 92
**State 8th Rank**



**Moulya R. Gowda**
PCMB: Total - 587 - (97.8%)
Phy: 100 ; Maths: 100 ; Chem: 100
Bio: 100 ; Kan: 94 ; Eng: 93
**State 10th Rank**



**Pooja J. Yadav**
BASC: Total - 580 - (96.66%)
B: 99 ; S: 98 ; A: 97 ; E: 96
H: 96 ; C: 94
**State 15th Rank**



**Sujal Kumar R.**
PCMB: Total - 576 - (96%)
Phy: 95 ; Maths: 100 ; Chem: 94
Bio: 96 ; Hin: 99 ; Eng: 92
**State 20th Rank**



**Prof. Dr. Jayarama Shetty S.**
M.A., M.Ed., M.Sc., M.B.A., Ph.D., P.G.D.P.M.I.R., F.M.S.P.I., D.B.M.
Founder / Director

An epitome in the field of education. A renowned educationist, philanthropist and psychologist who has been a catalyst in many success stories. Dr. Shetty has been mentoring, guiding, counselling and nurturing students for over a period of four decades, both in Mangalore and Bangalore. He has been persistent in seeking remarkable results with ranks and distinction by adopting innovative pedagogy.

**For more information on Admission Contact:**
**Ph: 080-23218381**
**M: 8884666558**

ADVT.

ಬಂಟರ ಸಂಘ ಬೆಂಗಳೂರು
BUNTS' SANGHA BANGALORE

## ವಿವಾಹ ವೇದಿಕೆ ಸಮಿತಿ

ಬೆಂಗಳೂರು ಬಂಟರ ಸಂಘದ ವಿವಾಹ ವೇದಿಕೆ ಸಮಿತಿ ವತಿಯಿಂದ
ಉಚಿತ ಸಾಮೂಹಿಕ ವಿವಾಹ ಯೋಜನೆಯ ಅಡಿಯಲ್ಲಿ ಜರುಗುವ

# 'ಕಂಕಣ ಭಾಗ್ಯ'

## ಸಾಮೂಹಿಕ ವಿವಾಹ ಕಾರ್ಯಕ್ರಮ

ದಿನಾಂಕ: 02.04.2023, ಆದಿತ್ಯವಾರ

ಸಮಯ : ಬೆಳಗ್ಗೆ 11.30 ಘಂಟೆಗೆ

ಸದಸ್ಯ ಬಾಂಧವರೆಲ್ಲ
ಈ ಕಾರ್ಯಕ್ರಮದಲ್ಲಿ ಭಾಗವಹಿಸಬೇಕಾಗಿ ವಿನಂತಿ

ಆನಂದರಾಮ ಶೆಟ್ಟಿ ಬಿ.
ಗೌರವ ಕಾರ್ಯದರ್ಶಿ

ಎಂ. ಮುರಳೀಧರ ಹೆಗ್ಡೆ
ಅಧ್ಯಕ್ಷರು

ಸುರೇಂದ್ರ ಶೆಟ್ಟಿ ಎ.
ಸಂಚಾಲಕರು, ವಿವಾಹ ವೇದಿಕೆ ಸಮಿತಿ
ಮೊ: 9741910925

ಶ್ರೀಮತಿ ಶೋಭ ಶೇಕ
ಚೇರ್‌ಪರ್ಸನ್, ವಿವಾಹ ವೇದಿಕೆ ಸಮಿತಿ
ಮೊ: 9901885998

ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಮತ್ತು
ವಿವಾಹ ವೇದಿಕೆ ಸಮಿತಿ ಸದಸ್ಯರು

ಬಂಟರ ಸಂಘ ಬೆಂಗಳೂರು
BUNTS' SANGHA BANGALORE

# ಬಂಟ್ಸ್ ಸೇವಾದಳ

## "ವಿದ್ಯಾಸಿರಿ ಯೋಜನೆ"

ನಮ್ಮ ಸಂಘದ "ಬಂಟ್ಸ್ ಸೇವಾದಳ"ದ ವತಿಯಿಂದ 'ವಿದ್ಯಾಸಿರಿ ಯೋಜನೆ' ಅಡಿಯಲ್ಲಿ ಆರ್ಥಿಕವಾಗಿ ಹಿಂದುಳಿದ ಸಮುದಾಯದ ವಿದ್ಯಾರ್ಥಿಗಳ ಶಿಕ್ಷಣಕ್ಕೆ ನೆರವಾಗಲು, 2023-24ನೇ ಸಾಲಿಗೆ ಶಾಲಾ ನೋಟ್ ಪುಸ್ತಕ ಹಾಗೂ ಕಲಿಕಾ ಸಾಮಾಗ್ರಿಗಳನ್ನು ನೀಡಲು ನಿರ್ಧರಿಸಲಾಗಿದೆ.

ಪ್ರಸ್ತುತ ಬೆಂಗಳೂರು ನಗರದಲ್ಲಿ ವಾಸಿಸುತ್ತಿದ್ದು, ನರ್ಸರಿಯಿಂದ 10ನೇ ತರಗತಿಯವರೆಗೆ ಶಿಕ್ಷಣ ಪಡೆಯುತ್ತಿರುವ ಆರ್ಥಿಕವಾಗಿ ಹಿಂದುಳಿದ ಅಭ್ಯರ್ಥಿಗಳು ಈ ಯೋಜನೆಗೆ ಅರ್ಜಿ ಸಲ್ಲಿಸಬಹುದಾಗಿದೆ.

ಸೂಚನೆ : ಹೆಚ್ಚಿನ ವಿವರಗಳಿಗೆ ಈ ಕೆಳಗಿನ ಮೊಬೈಲ್ ನಂಬರಿಗೆ ಕರೆಮಾಡಬಹುದಾಗಿದೆ.

**ಮೊ. : 9741220559**

ಸಂಘದ ಕಛೇರಿ : 7022119739 / 080-23399635-636

ಆನಂದರಾಮ ಶೆಟ್ಟಿ ಬಿ.
ಗೌರವ ಕಾರ್ಯದರ್ಶಿ

ಎಂ. ಮುರಳೀಧರ ಹೆಗ್ಡೆ
ಅಧ್ಯಕ್ಷರು

ಸತೀಶ್ ಶೆಟ್ಟಿ
ಸಂಚಾಲಕರು, ಬಂಟ್ಸ್ ಸೇವಾದಳ

ಉಮೇಶ್ ಕುಮಾರ್ ಶೆಟ್ಟಿ
ಚೇರ್‌ಪರ್ಸನ್, ಬಂಟ್ಸ್ ಸೇವಾದಳ

**BUNTS'SANGHA BANGALORE**
**No. 324, Chord Road, Vijayanagar, Bangalore – 560 040**
Tel: 080-23399323/ 23399635/ 23399636

Parent / Guardian Applicant

# Bunts' Sevadal
# ಬಂಟ್ಸ್ ಸೇವಾದಳ

**Application for availing Note book & Stationery items under 'Vidyasiri'Scheme**
**'ವಿದ್ಯಾಸಿರಿ' ಯೋಜನೆಯಡಿಯಲ್ಲಿ ನೋಟ್ ಪುಸ್ತಕ ಹಾಗೂ ಕಲಿಕಾ ಸಾಮಗ್ರಿಗಳು**

To,
The Hon. Secretary
Bunts' Sangha Bangalore

**Sir/ ಮಾನ್ಯರೇ,**
I/we request you to consider my application under "Vidyasiri" Scheme / ವಿದ್ಯಾಸಿರಿ ಯೋಜನೆಗೆ ನನ್ನ ಅರ್ಜಿಯನ್ನು ಪರಿಗಣಿಸಲು ಮನವಿ.

| | |
|---|---|
| Name of the Applicant : ಅಭ್ಯರ್ಥಿಯ ಹೆಸರು | |
| Father's Name : ತಂದೆಯ ಹೆಸರು | |
| Mother's Name : ತಾಯಿಯ ಹೆಸರು | |
| Address & Mob./Tel. No/ ವಿಳಾಸ ಮತ್ತು ಮೊ./ದೂರವಾಣಿ ಸಂಖ್ಯೆ : | |

| Family particulars / ಕುಟುಂಬ ಸದಸ್ಯರ ವಿವರ | Occupation / ಉದ್ಯೋಗ | Annual Income/ ವಾರ್ಷಿಕ ಆದಾಯ | Education / ವಿದ್ಯಾರ್ಹತೆ |
|---|---|---|---|
| Father / ತಂದೆ | | | |
| Mother / ತಾಯಿ | | | |

Details of the Applicant / ಅಭ್ಯರ್ಥಿಯ ವಿದ್ಯಾರ್ಹತೆಯ ಹಿನ್ನೆಲೆ

| Class (presently Studying) | Academic Year/ ಶೈಕ್ಷಣಿಕ ವರ್ಷ | State/ CBSC/ ICSE | Name & address of the Institution/ ಶಿಕ್ಷಣ ಸಂಸ್ಥೆಯ ಹೆಸರು ಮತ್ತು ವಿಳಾಸ |
|---|---|---|---|
| | | | |

| Two references of members of Bunts' Sangha Bangalore with full address and telephone number/ ಬೆಂಗಳೂರು ಬಂಟರ ಸಂಘದ ಎರಡು ಸದಸ್ಯರುಗಳ ಶಿಫಾರಸ್ಸು. The applicant is known to me and I hereby declare that, the particulars furnished by them above are true and correct/ ಈ ಅಭ್ಯರ್ಥಿಯ ಬಗ್ಗೆ ನನಗೆ ತಿಳಿದಿದ್ದು, ಇವರು ಸಲ್ಲಿಸಿದ ವಿವರಗಳು ಸತ್ಯತೆಯಿಂದ ಕೂಡಿದೆ. | |
|---|---|
| 1. Name / ಹೆಸರು<br>Address / ವಿಳಾಸ<br><br>Tel. /Mob. No/ ದೂರವಾಣಿ/ಮೊಬೈಲ್ ಸಂಖ್ಯೆ:<br>**Signature/ ಸಹಿ** | 2. Name / ಹೆಸರು<br>Address / ವಿಳಾಸ<br><br>Tel./Mob.No/ ದೂರವಾಣಿ/ಮೊಬೈಲ್ ಸಂಖ್ಯೆ:<br>**Signature/ ಸಹಿ** |

**DECLARATION**

The particulars furnished above are true & correct. **ನಾವು ನೀಡಿದ ವಿವರಗಳು ಸತ್ಯ ಮತ್ತು ಸರಿಯಾಗಿವೆ.**

***Signature of Applicant***
ಅಭ್ಯರ್ಥಿಯ ಸಹಿ

***Signature of Parent/Guardian***
ಹೆತ್ತವರ/ ಪೋಷಕರ ಸಹಿ

**Student has to furnish the following documents along with the application / ಅಭ್ಯರ್ಥಿಯು ಈ ಕೆಳಗಿನ ದಾಖಲೆಗಳನ್ನು ಅರ್ಜಿಯೊಂದಿಗೆ ಸಲ್ಲಿಸುವುದು.**

1. Certified copy of Ration Card / APL /BPL / Anthyodhaya Card / ಧೃಢೀಕೃತ / ರೇಷನ್ ಕಾರ್ಡ / ಬಿ.ಪಿ.ಎಲ್/ ಎ.ಪಿ.ಎಲ್ ಅಂತ್ಯೋದಯ ಕಾರ್ಡ್‌ನ ಪ್ರತಿ.
2. Study Certificate / ವ್ಯಾಸಂಗ ಪ್ರಮಾಣ ಪತ್ರ.
3. Aadhar Card copy / ಆಧಾರ್‌ಕಾರ್ಡ್ ಪ್ರತಿ
4. Certified copy of the marks card of the last examination/ ಹಿಂದಿನ ಪರೀಕ್ಷೆಯ ಧೃಢೀಕೃತ ಅಂಕಪಟ್ಟಿಯ ಪ್ರತಿ

## FOR OFFICE USE

Date:

**Chairperson,**
Bunts' Sevadal

# ಬಂಟರ ಸಂಘ ಬೆಂಗಳೂರು

## ಬಂಟ್ಸ್ ಸೇವಾದಳ

## "ವಿದ್ಯಾಸಿರಿ ಯೋಜನೆ"

ನಮ್ಮ ಸಂಘದ "ಬಂಟ್ಸ್ ಸೇವಾದಳ"ದ ವತಿಯಿಂದ 'ವಿದ್ಯಾಸಿರಿ ಯೋಜನೆ' ಅಡಿಯಲ್ಲಿ ಆರ್ಥಿಕವಾಗಿ ಹಿಂದುಳಿದ ಸಮುದಾಯದ ವಿದ್ಯಾರ್ಥಿಗಳ ಶಿಕ್ಷಣಕ್ಕೆ ನೆರವಾಗಲು, 2023–24ನೇ ಸಾಲಿಗೆ ಶಾಲಾ ನೋಟ್ ಪುಸ್ತಕ ಹಾಗೂ ಕಲಿಕಾ ಸಾಮಗ್ರಿಗಳನ್ನು ನೀಡಲು ನಿರ್ಧರಿಸಲಾಗಿದೆ.

ಪ್ರಸ್ತುತ ಬೆಂಗಳೂರು ನಗರದಲ್ಲಿ ವಾಸಿಸುತ್ತಿದ್ದು, ನರ್ಸರಿಯಿಂದ 10ನೇ ತರಗತಿಯವರೆಗೆ ಶಿಕ್ಷಣ ಪಡೆಯುತ್ತಿರುವ ಆರ್ಥಿಕವಾಗಿ ಹಿಂದುಳಿದ ಅಭ್ಯರ್ಥಿಗಳು ಈ ಯೋಜನೆಗೆ ಅರ್ಜಿ ಸಲ್ಲಿಸಬಹುದಾಗಿದೆ.

**ಅರ್ಜಿ ಸಲ್ಲಿಸಲು ನಿಯಮ/ ಮಾನದಂಡಗಳು**

- ಬೆಂಗಳೂರಿನಲ್ಲಿ ತಮ್ಮ ಕುಟುಂಬದೊಂದಿಗೆ ವಾಸವಿದ್ದು, ಬೆಂಗಳೂರಿನ ಶಾಲೆಗಳಲ್ಲಿ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳು (ಸಂಘದ ಸದಸ್ಯರು ಹಾಗೂ ಸದಸ್ಯೇತರರು) ಅರ್ಜಿ ಸಲ್ಲಿಸಬಹುದಾಗಿದೆ.
- ಬೆಂಗಳೂರಿನ ವಿಳಾಸ ದೃಢೀಕರಣ ಪತ್ರ ಕಡ್ಡಾಯ.
- 10ನೇ ತರಗತಿವರೆಗೆ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳು ಈ ಯೋಜನೆಗೆ ಅರ್ಹರು.
- ಆಯ್ಕೆಯಾದ ವಿದ್ಯಾರ್ಥಿಗಳಿಗೆ ಒಟ್ಟು ವಾರ್ಷಿಕವಾಗಿ ಅಗತ್ಯವಿರುವ ಶೈಕ್ಷಣಿಕ ನೋಟ್ ಪುಸ್ತಕ ಹಾಗೂ ಕಲಿಕಾ ಸಾಮಗ್ರಿಗಳನ್ನು ವಿತರಿಸಲಾಗುವುದು.
- ನಿಮಗೆ ಆರ್ಥಿಕ ಅನಾನುಕೂಲತೆಗಳು ಇದ್ದರೆ ಮಾತ್ರ ಈ ಯೋಜನೆಯಡಿಯಲ್ಲಿ ಅರ್ಜಿಯನ್ನು ಸಲ್ಲಿಸಿ.
- ಅರ್ಜಿಯೊಂದಿಗೆ ಲಗತ್ತಿಸಬೇಕಾದ ದಾಖಲೆಗಳು
- ವಿದ್ಯಾರ್ಥಿ ಹಾಗೂ ತಂದೆ/ತಾಯಿ/ ಪೋಷಕರ ವಿಳಾಸ ಧೃಢೀಕರಣದ ಪ್ರತಿ (ಆಧಾರ್‌ಕಾರ್ಡ್, ವೋಟರ್‌ಐಡಿ, ಬ್ಯಾಂಕ್ ಪಾಸ್ ಪುಸ್ತಕ ಇತ್ಯಾದಿ).
- ಬೆಂಗಳೂರು ಬಂಟರ ಸಂಘದ ಸದಸ್ಯತ್ವದ ಗುರುತಿನ ಚೀಟಿಯ ಪ್ರತಿ (ಸದಸ್ಯರಾಗಿದ್ದಲ್ಲಿ).
- ಕಳೆದ ಶೈಕ್ಷಣಿಕ ಸಾಲಿನ ಅಂಕ ಪಟ್ಟಿಯ ಧೃಢೀಕೃತ ಪ್ರತಿ.
- ರೇಷನ್‌ಕಾರ್ಡ್ ಪ್ರತಿ.

ಅಗತ್ಯವಿರುವ ಸಮುದಾಯ ಬಾಂಧವರು ಈ ಸೌಲಭ್ಯ ಪಡೆಯಲಿಚ್ಛಿಸಿದಲ್ಲಿ ಸೂಕ್ತ ದಾಖಲೆಗಳೊಂದಿಗೆ ನಿಗದಿತ ಅರ್ಜಿ ನಮೂನೆಯನ್ನು ಭರ್ತಿಮಾಡಿ ಸಂಘದ ಕಛೇರಿಗೆ ದಿನಾಂಕ 30.04.2023ರ ಒಳಗಾಗಿ ಅರ್ಜಿ ಸಲ್ಲಿಸತಕ್ಕದ್ದು.

ಸೂಚನೆ : ಹೆಚ್ಚಿನ ವಿವರಗಳಿಗೆ ಸಂಘದ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

ದೂರವಾಣಿ : 9741220559 / 7022119739 / 080–23399635 / 23399636 / 23399323,
ಇಮೈಲ್ : info@buntsanghablr.com, Website: www.buntsanghablr.com

**ಆನಂದರಾಮ ಶೆಟ್ಟಿ ಬಿ.**
ಗೌರವ ಕಾರ್ಯದರ್ಶಿ

**ಎಂ. ಮುರಲೀಧರ ಹೆಗ್ಡೆ**
ಅಧ್ಯಕ್ಷರು

**ಸತೀಶ್ ಶೆಟ್ಟಿ**
ಸಂಚಾಲಕರು

**ಉಮೇಶ್‌ಕುಮಾರ್ ಶೆಟ್ಟಿ**
ಚೇರ್‌ಪರ್ಸನ್

**ಬಂಟ್ಸ್ ಸೇವಾದಳ**

# REPORT ON GRADUATION DAY

'The future belongs to those who believe in the beauty of their dreams.'

Graduation day comes with a myriad of emotions for students, teachers and parents alike. It's the day we celebrate, reflect and reminiscent the best moments of the bygone year.

Bunts' Sangha RNS Vidyaniketan and Composite PU College commemorated the most awaited 'Graduation Day' on 3rd February, 2023, for the outgoing batches of 10th ICSE, CBSE and II PUC.

The event began with the Principal, Sri Yesudas welcoming the august audience followed by lighting the lamp by the dignitaries. The best outgoing students from across all the streams were awarded with mementos and certificates. The prefects for the current year passed on their beacon of responsibilities to their juniors who pledged to uphold the integrity of the institution.

The Convenor of Bunts'Sangha, Bangalore, Sri Anandram Shetty B, spoke about the right choices to be made by the students for their bright future.

The Chief Guest of the evening, Dr.C. Ramachandra (Former Director & Professor and HOD, Kidwai Memorial Institute of Oncology, Bangalore) addressed and advised the students to nurture their dreams and cultivate the skills to achieve them.

The Treasurer of Bunts' Sangha Bangalore, Sri Amarnath Hegde wished all the outgoing students for their bright future. The momentous evening drew to a close with the vote of thanks and invigorating National Anthem followed by Hi-tea.

## ಬಂಟರ ಸಂಘ ಮೈಸೂರು ವಾರ್ಷಿಕ ಕ್ರೀಡೋತ್ಸವ

ಮೈಸೂರು ಬಂಟರ ಸಂಘ ಆಯೋಜಿಸಿದ್ದ ವಾರ್ಷಿಕ ಕ್ರೀಡೋತ್ಸವವು 26.01.2023ರಂದು ಸಂಘದ ಅಧ್ಯಕ್ಷರಾದ ಶ್ರೀ ತೊಂಬತ್ತು ಪ್ರಭಾಕರ ಶೆಟ್ಟಿಯವರಿಂದ ಜ್ಯೋತಿ ಬೆಳಗಿಸುವುದರೊಂದಿಗೆ ಉದ್ಘಾಟನೆಗೊಂಡು, ಸಂಘದ ಗೌರವ ಕಾರ್ಯದರ್ಶಿಗಳಾದ ಶ್ರೀ ನಂದ್ಯಪ್ಪ ಶೆಟ್ಟಿಯವರಿಂದ ಸ್ವಾಗತ ಭಾಷಣದೊಂದಿಗೆ ಸರ್ವ ಕ್ರೀಡಾಭಿಮಾನಿಗಳ ಸಮ್ಮುಖದಲ್ಲಿ ಜರುಗಿತು. ಸಂಗೀತ ಮಾಂತ್ರಿಕ ಶ್ರೀ ಗುರುಕಿರಣ್‌ರವರು ಕಾರ್ಯಕ್ರಮಕ್ಕೆ ಆಗಮಿಸಿ ಶುಭ ಹಾರೈಸಿದರು. ಎಲ್ಲಾ ತರಹದ ಕ್ರೀಡಾ ಚಟುವಟಿಕೆಗಳೊಂದಿಗೆ ನಡೆದ ಈ ಕ್ರೀಡೋತ್ಸವವು 29.01.2023ರಂದು ಸಮಾಪ್ತಿಗೊಂಡಿತು.

## Proud Achiever



Mrs Veena P Alva, W/o Mr. Pushparaja Alva B, is a well accomplished woman in the Bunts' Community who has scaled to new heights in her profession as a LIC advisor through her relentless dedication to her profession. She has been a Life member of the Prestigious, Internationally acclaimed Million Dollar Round Table (MDRT) USA,The Premier Association of Financial Professionals, consecutively for 17 years since 2006. Veena Alva had participated at the MDRT Annual convention held in Toronto Canada. Other prestigious awards like Agent Rathna, Club Galaxy, Mega Star, Leap award are the additional feathers to her cap.

Bunts' Sangha Bangalore congratulates and wishes her all the best in her future endeavours.

# BUNTS' SANGHA RNS VIDYANIKETAN
# ICSE Primary
# Report on Annual Day – Kalotsav 2022-23

Annual day is an integral part of school activities. It is an occasion of celebration felicitation, feast and festivity. When students present not only their wonderful performances but also receive honours for their curricular and co-curricular achievements. The ICSE wing of Bunts' Sangha RNS Vidyaniketan-1 celebrated its annual day – KALOSTAV on 7th February 2023. The event was conducted in Radhabai Thimmappa Bhandary Auditorium, Bunts' Sangha complex, Vijayanagar. The auditorium was adorned with flowers, lights and with thematic decorations. Orchestring the flow of events anchors of the event were Mrs. Abhilasha Srivatsav and Mrs. Meenakshi Sundar. The chief guest was Mr Ramesh.B.Umarani, director of Vivekananda Institutes for youth awakening. Kalotsav was presided over by Sri. M. Muralidhar Hegde, President Bunts' Sangha Bangalore.



The event started on an auspicious note, with students of school choir invoking the blessings of Lord Ganesha.

As the divine music reverberated through the auditorium, the audience and guests were enthralled. Then the Principal Mr. Yesudas welcomed the gathering with so much enthusiasm.

Lighting of the lamp by the dignitaries and guest followed to kindle the lamp of knowledge and wisdom. Our school annual report was presented by head mistress (of ICSE wing) Mrs. Somavathi.R.Shetty who highlightened the glories and achievements of school.

Mr Anandaram Shetty, the convener of BSRNSV gave the key note address. He emphasized the need of discipline in every student's life. He put the spotlight on productivity and hard work goes hand in hand for achieving goals.

Address by the chief guest Mr. Ramesh.B. Umarani was an icing on the cake. He put forth various points on different developmental aspects of children.



He also highlighted the necessity of mindful parenting. Audience and the everyone gathered were spell bound by his thought-

provoking speech. Dignitaries felicitated the chief guest. Then the President Muralidhar Hedge's speech deepened the understanding about students and their varied needs as well as interests.

He laid stress on motivating and encouraging each child based on their strength and weaknesses. Heartfelt gratitude, (i.e.) vote of thanks by Mrs.Vidya C followed. She said "Thank You" is a magical word that does wonders.

Cultural extravaganza by the students of class 1-5 began with spectacular dance programs. Children dressed in colourful costumes accompanied with foot tapping music danced with great gusto.

Dances of different states of India and across countries were choreographed to perfection. With hearts swelling with joy and pride, the audience were enthralled with astounding applause. The 'Yakshagana' was the jewel of the cultural program.

Kalostav came to an end with National Anthem.

## ಅಭಿನಂದನೆಗಳು




ನಮ್ಮ ಸಂಘದ ಸದಸ್ಯೆ ಶ್ರೀಮತಿ **ಮುಕ್ತಾ ಉದಯರಾಜ್ ಶೆಟ್ಟಿ**, ಜಪ್ಪುಗುಡ್ಡೆ ಗುತ್ತು ಇವರು ಫೆಬ್ರವರಿ 14 ರಿಂದ 18ನೇ ತಾರೀಕಿನವರೆಗೆ ವೆಸ್ಟ್ ಬೆಂಗಾಲ್‌ನಲ್ಲಿ ನಡೆದ 43ನೇ ನ್ಯಾಶನಲ್ ಮಾಸ್ಟರ್ಸ್ ಅಥ್ಲೆಟಿಕ್ ಚಾಂಪಿಯನ್ ಶಿಪ್‌ನಲ್ಲಿ 4x100 ಮೀಟರ್ ರಿಲೆಯಲ್ಲಿ ಪ್ರಥಮ ಸ್ಥಾನವನ್ನು ಗಳಿಸಿರುತ್ತಾರೆ. ನಮ್ಮ ಹೆಮ್ಮೆಯ ಹಿರಿಯ ಅಥ್ಲಿಟ್‌ಗೆ ಸಂಘದ ಪರವಾಗಿ ಹಾರ್ದಿಕ ಅಭಿನಂದನೆಗಳು.

## Congratulations

**Bharatiya Krida Rathna award to Smt. Shyamala Shetty**




Smt. Shyamala Shetty has been awarded with "Bharthiya Krida Rathna Award" in the category of outstanding sports person and coach in Weight Lifting, by Global Scholars Foundation, Pune. The award ceremony was held at Goa on 12th February 2023. Bunts Sangha Bangalore congratulates and wishes her all the best.

# ಭಾಗವತಿಕೆಗೆ ಮಂಗಳ ಹಾಡಿದ ಬಲಿಪ ನಾರಾಯಣ ಭಾಗವತರು

ತೆಂಕುತಿಟ್ಟು ಯಕ್ಷರಂಗದ ಭೀಷ್ಮ, ಪ್ರಸಂಗಕರ್ತ ಸುಮಾರು ಆರು ದಶಕಗಳ ಕಾಲ ತೆಂಕುತಿಟ್ಟು ಯಕ್ಷಗಾನ ಮೇಳದಲ್ಲಿ ಭಾಗವತರಾಗಿ ಸೇವೆ ಸಲ್ಲಿಸಿದ ಬಲಿಪ ನಾರಾಯಣ ಭಾಗವತರು ತನ್ನ 85ನೇ ವಯಸ್ಸಿನಲ್ಲಿ 16.02.2023ರಂದು ಮೂಡಬಿದಿರೆ ಸಮೀಪದ ನೂಯಿಯಲ್ಲಿರುವ ಅವರ ಸ್ವಗೃಹದಲ್ಲಿ ನಿಧನರಾದರು.



ಕಾಸರಗೋಡಿನ ಪಡ್ರೆ ಗ್ರಾಮದಲ್ಲಿ ಮಾರ್ಚ್ 13. 1938ರಂದು ಬಲಿಪ ನಾರಾಯಣ ಭಾಗವತರು ಜನಿಸಿದರು. ಅವರ ತಂದೆ ಮಾಧವ ಭಟ್ ಮತ್ತು ತಾಯಿ ಸರಸ್ವತಿ. ಅವರು 7ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದರು. ತಮ್ಮ ಅಜ್ಜ ದಿ। ಬಲಿಪ ನಾರಾಯಣ ಭಾಗವತರಿಂದ ಭಾಗವತಿಕೆ ಕಲಿತು 13ನೇ ವರ್ಷದಲ್ಲಿ ರಂಗ ಪ್ರವೇಶಗೈದರು. ಬಲಿಪ ನಾರಾಯಣ ಭಾಗವತರ ಪತ್ನಿ ಜಯಲಕ್ಷ್ಮೀ, ಪುತ್ರರಾದ ಮಾಧವ ಬಲಿಪರಿಗೆ ಹಿಮ್ಮೇಳ ವಾದನ ತಿಳಿದಿದ್ದು, ಶಿವಶಂಕರ ಬಲಿಪ ಮತ್ತು ಪ್ರಸಾದ ಬಲಿಪರು ಉತ್ತಮ ಭಾಗವತರರು. ಇಬ್ಬರೂ ಕಟೀಲು ಮೇಳದಲ್ಲಿ ಭಾಗವತರಾಗಿ ಸೇವೆ ಸಲ್ಲಿಸಿದ್ದರು. ಶ್ರೀ ಪ್ರಸಾದ ಬಲಿಪರು ಇತ್ತೀಚೆಗೆ ಮೃತ ಪಟ್ಟಿದ್ದರು. ಇನ್ನೋರ್ವ ಪುತ್ರ ಶಶಿಧರ ಬಲಿಪರು ಕೃಷಿಕರು.

ಮೂಲ್ಕಿ ಕೂಡ್ಲು ಮೇಳಗಳಲ್ಲಿ ಭಾಗವತರಾಗಿ ಸೇವೆ ಸಲ್ಲಿಸಿದ ಅವರು ಕಟೀಲು ಶ್ರೀ ದುರ್ಗಾಪರಮೇಶ್ವರಿ ಯಕ್ಷಗಾನ ಮೇಳದಲ್ಲಿ 40 ವರ್ಷಗಳ ಕಾಲ ಭಾಗವತರಾಗಿ ಸೇವೆ ಸಲ್ಲಿಸಿ ಸಾವಿರಾರು ಯಕ್ಷಾಭಿಮಾನಿಗಳನ್ನು ಗಳಿಸಿದ್ದರು. ಬಲಿಪ ನಾರಾಯಣ ಭಾಗವತರು 60 ವರ್ಷಗಳ ಕಾಲ ಯಕ್ಷಗಾನ ಕಲಾಸೇವೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಪಡ್ರೆ ಜಟಾಧಾರಿ ಮೇಳವನ್ನು ಮೊದಲಿಗೆ ಆರಂಭಿಸಿದರು. ಯಕ್ಷಗಾನದಲ್ಲಿ 50ಕ್ಕೂ ಹೆಚ್ಚು ಪ್ರಸಂಗಗಳ ಕಂಠಪಾಠ ಬಲಿಪರಿಗಿತ್ತು. 30 ಪ್ರಕಟಿತ ಮತ್ತು 15 ಅಪ್ರಕಟಿತ ಯಕ್ಷಗಾನ ಪ್ರಸಂಗಗಳನ್ನು ರಚಿಸಿದ್ದಾರೆ. ಅವರ ಯಕ್ಷಗಾನದ ಸುಧೀರ್ಘ ಸೇವೆಗಾಗಿ 75ರ ಸಂಭ್ರಮದಲ್ಲಿ ಮನೆಯ ಬಳಿ ಯಕ್ಷಾಭಿಮಾನಿಗಳು ಬಲಿಪ ಅಮೃತ ಭವನವನ್ನು ಕಟ್ಟಿಸಿ ಕೊಟ್ಟಿದ್ದಾರೆ.

ಬಲಿಪ ನಾರಾಯಣ ಭಾಗವತರು ಐದು ದಿನದ "ದೇವಿ ಮಹಾತ್ಮೆ" ಎಂಬ ಮಹಾ ಪ್ರಸಂಗವನ್ನು ರಚಿಸಿದ್ದು, ವೇಣೂರಿನ ಕಜೆ ಸುಬ್ರಹ್ಮಣ್ಯ ಭಟ್ ಮತ್ತು ಅವರ ಸ್ನೇಹಿತರು ಪ್ರಕಟಿಸಿದ್ದು, ಯಕ್ಷಗಾನದ ಇತಿಹಾಸದಲ್ಲೇ ಇದೊಂದು ಮಹತ್ವದ ಕೃತಿಯಾಗಿದೆ.

ಬಲಿಪರಿಗೆ ಬಂದ ಪ್ರಶಸ್ತಿಗಳು ಹಲವಾರು. ಅದರಲ್ಲಿ ಮುಖ್ಯವಾಗಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಸಾಮಗ ಪ್ರಶಸ್ತಿ, ಕರ್ನಾಟಕ ರತ್ನ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಜ್ಞಾನ ಪ್ರಶಸ್ತಿ, ಪಾರ್ತಿಸುಬ್ಬ ಪ್ರಶಸ್ತಿ, ಕರ್ನಾಟಕ ಜಾನಪದ ಪರಿಷತ್ ದೊಡ್ಡಮನೆ ಲಿಂಗೇಗೌಡ ಪ್ರಶಸ್ತಿ, 71ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಕರ್ನಾಟಕ ಶ್ರೀ ಪ್ರಶಸ್ತಿ, ಪದವೀಧರ ಯಕ್ಷಗಾನ ಮಂಡಳಿ ಮುಂಬಯಿ ಆಗರಿ ಪ್ರಶಸ್ತಿ, ಶೇಣಿ ಪ್ರಶಸ್ತಿ, ಕವಿ ಮುದ್ದಣ್ಣ ಪುರಸ್ಕಾರ, ಕೂಡ್ಲು ಸುಬ್ರಾಯ ಶ್ಯಾನುಭೋಗ ಪ್ರಶಸ್ತಿ, ಕರ್ನಾಟಕ ಸಂಘ ದುಬೈಯಲ್ಲಿ ಸನ್ಮಾನ, ಆಳ್ವಾಸ್ ನುಡಿಸಿರಿ ಪ್ರಶಸ್ತಿಲಭಿಸಿದೆ. ಇವರ ನಿಧನಕ್ಕೆ ಹಲವಾರು ರಾಜಕೀಯ ಮುಖಂಡರು, ಸ್ವಾಮೀಜಿಯವರು, ಯಕ್ಷಗಾನ ಅಭಿಮಾನಿಗಳು ಸಂತಾಪ ಸೂಚಿಸಿದ್ದಾರೆ. ಮುಖ್ಯವಾಗಿ ಪ್ರಧಾನಿ ಶ್ರೀ ನರೇಂದ್ರ ಮೋದಿಯವರು ಯಕ್ಷಗಾನ ಭಾಗವತಿಕೆಯ ಭೀಷ್ಮ ಬಲಿಪ ನಾರಾಯಣ ಭಾಗವತರ ನಿಧನಕ್ಕೆ ಸಂತಾಪ ವ್ಯಕ್ತಪಡಿಸಿ, ಬಲಿಪ ನಾರಾಯಣ ಭಾಗವತರು ಸಾಂಸ್ಕೃತಿಕ ಲೋಕದಲ್ಲಿ ತಮ್ಮದೇ ಆದ ಛಾಪು ಮೂಡಿಸಿದವರು. ಯಕ್ಷಗಾನದಲ್ಲಿ ಹಿನ್ನೆಲೆ ಗಾಯನಕ್ಕಾಗಿ ತಮ್ಮ ಜೀವನವನ್ನೇ ಮುಡಿಪಾಗಿಸಿಟ್ಟವರು. ಅವರ ಗಾಯನಶೈಲಿ ಮುಂದಿನ ಪೀಳಿಗೆಯ ಮೆಚ್ಚುಗೆಗೂ ಪಾತ್ರವಾಗಿದೆ. ಅವರ ಅಗಲುವಿಕೆ ನೋವುಂಟು ಮಾಡಿದ್ದು, ಅವರ ಕುಟುಂಬಕ್ಕೆ ದುಃಖವನ್ನು ಸಹಿಸುವ ಶಕ್ತಿ ನೀಡಲಿ ಓಂ ಶಾಂತಿ ಎಂದು ಸಂತಾಪ ವ್ಯಕ್ತಪಡಿಸಿದ್ದಾರೆ.

ಯಕ್ಷಗಾನದ ಹಿರಿಯಾಳು ಅಸಾದಾರಣ ಸಿದ್ಧಿಯ ಭಾಗವತ ವಿದೇಶದ ಒಬ್ಬ ಹಾಡುಗಾರನಾಗಿದ್ದರೆ ಗಿನ್ನೆಸ್ ದಾಖಲೆಗೆ ಸೇರಬೇಕಾದ ಸಾಧಕ. ಲೆಕ್ಕವಿಲ್ಲದಷ್ಟು ಪ್ರಸಂಗ ಬರೆದು ಪ್ರಯೋಗಿಸಿದ ಮಹಿಮ, ಅದ್ಭುತ ರಂಗ ಚಿಂತಕ ಪ್ರತಿಯೊಂದು ಪ್ರಸಂಗಗಳನ್ನು ಸಮರ್ಥವಾಗಿ ನಡೆಸಿಕೊಂಡಿರುವ ಅನುಭವಿ. ಬಲಿಪ ಪರಂಪರೆ ಯಕ್ಷಗಾನದ ನಿಜ ಪರಂಪರೆ. ಅವರೆಂದೂ ಯಕ್ಷಗಾನ ಬಿಟ್ಟು ಸಾಗಲಿಲ್ಲ. ವೃದ್ಧಾಪ್ಯದಲ್ಲೂ ಏರು ಸ್ವರದ ಮಿಂಚಿನ ಸಂಚಾರವನ್ನು ಚಿಮ್ಮಿಸಿ ರೋಮಾಂಚನಗೊಳಿಸುತ್ತಿದ್ದ ಬಲಿಪರ ಚಾಗಟೆ ಸ್ತಬ್ಧವಾಯಿತೆಂದರೆ ನಂಬಲೇಬೇಕಾದ ಅನಿವಾರ್ಯತೆ ಅವರ ಅಭಿಮಾನಿಗಳಿಗೆ. ಭಾಗವತರು ತುಂಬಾ ಸಜ್ಜನರು, ಹಾಡುವಾಗ ಏರು ನುಡಿಯುವಾಗ, ಮೃದು, ಇದು ಹೀಗೆ ಇರತಕ್ಕದ್ದು ಎಂದು ಖಚಿತವಾಗಿ ಹೇಳುವ ಸಾಮರ್ಥ್ಯ ಅವರಿಗೆ ಮೀಸಲು. ಲೀಲಾಜಾಲವಾಗಿ ಅವರು ರಚಿಸಿದ ಪ್ರಸಂಗಗಳು ರಂಗದಲ್ಲಿ ಅತ್ಯಂತ ಯಶಸ್ವಿಯಾಗಿವೆ.

ಕಲಾವಾತೆ ಕಟೀಲು ಭ್ರಮರಾಂಬೆ ಅಗಲಿದ ಆತ್ಮಕ್ಕೆ ಚಿರಶಾಂತಿಯನ್ನು ನೀಡಲಿ ಎಂದು ಪ್ರಾರ್ಥಿಸುತ್ತಾ ಯಕ್ಷಗಾನಕ್ಕೆ ಅವರು ನೀಡಿದ ಕೊಡುಗೆ ಶಾಶ್ವತವಾಗಿ ಅಭಿಮಾನಿಗಳ ಮನಸ್ಸಿನಲ್ಲಿ ಉಳಿಯಲಿ ಎಂಬುದೆ ನಮ್ಮ ಆಶಯ.

ಸಂಗ್ರಹ : **ಸತ್ಯಾನಂದ ಮೇಲಾಂಟ ಎನ್.**

# ಬೆಂಗಳೂರು ಬಂಟರ ಸಂಘದ ಮಾಜಿ ಅಧ್ಯಕ್ಷರಾದ ಡಾ. ಎಂ. ತಿಮ್ಮಪ್ಪ ರೈಯವರಿಗೆ ನುಡಿನಮನ



ಬಂಟರ ಸಂಘದ ಮಾಜಿ ಅಧ್ಯಕ್ಷರು, ದಕ್ಷ ಆಡಳಿತಗಾರ, ಉತ್ತಮ ನಾಯಕತ್ವ ಹಾಗೂ ಸೇವಾ ಮನೋಭಾವನೆಯುಳ್ಳವರಾಗಿದ್ದ ಡಾ. ಎಂ. ತಿಮ್ಮಪ್ಪ ರೈ ಯವರು ದಿನಾಂಕ 21.02.2023ರಂದು ದೈವಾಧೀನರಾದರು. ಶ್ರೀಯುತರ ಗೌರವಾರ್ಥವಾಗಿ ನುಡಿನಮನ ಕಾರ್ಯಕ್ರಮವನ್ನು ದಿನಾಂಕ 03.03.2023, ಶುಕ್ರವಾರ ಸಂಜೆ 5.30ಕ್ಕೆ ಸಂಘದ ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸಭಾಭವನದಲ್ಲಿ ಸಂಘದ ವತಿಯಿಂದ ಏರ್ಪಡಿಸಲಾಗಿತ್ತು. ಸಂಘದ ಅಧ್ಯಕ್ಷರು, ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು, ಡಾ. ಎಂ. ತಿಮ್ಮಪ್ಪ ರೈಯವರ ಕುಟುಂಬ ವರ್ಗದವರು, ಸಂಘದ ಸದಸ್ಯರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಮಾಜಿ ಅಧ್ಯಕ್ಷರಾದ ಶ್ರೀ ಡಿ. ಚಂದ್ರಹಾಸ ರೈಯವರು ಕಾರ್ಯಕ್ರಮವನ್ನು ನಿರ್ವಹಿಸಿದರು ಹಾಗೂ ಗೌರವ ಕಾರ್ಯದರ್ಶಿಗಳಾದ ಶ್ರೀ ಬಿ. ಆನಂದರಾಮ ಶೆಟ್ಟಿಯವರು ಪ್ರಾಸ್ತಾವಿಕ ಮಾತುಗಳನ್ನಾಡಿದರು.



ಮಾಜಿ ಅಧ್ಯಕ್ಷರುಗಳಾದ ಶ್ರೀ ಬಿ.ಎಲ್.ಎನ್. ಹೆಗ್ಡೆ, ಶ್ರೀ ಹರೀಶ್ ಕುಮಾರ್ ಶೆಟ್ಟಿ, ಶ್ರೀ ಭಗವಾನ್‌ದಾಸ್ ರೈ, ಡಾ| ನರೇಶ್ ಶೆಟ್ಟಿ, ಶ್ರೀ ಆರ್. ಉಪೇಂದ್ರ ಶೆಟ್ಟಿ ಹಾಗೂ ಮಾಜಿ ಗೌರವ ಕಾರ್ಯದರ್ಶಿಗಳಾದ ಶ್ರೀ ಶ್ರೀಧರ್ ಹೆಗ್ಡೆಯವರು ನುಡಿನಮನ ಅರ್ಪಿಸಿದರು.

ದಿ. ಎಂ. ಟಿ. ರೈಯವರ ಅತ್ಯಾಪ್ತರಾಗಿದ್ದ ಪ್ರೊ. ಕೆ.ಇ. ರಾಧಾಕೃಷ್ಣರವರು ಅವರೊಂದಿಗಿನ ಒಡನಾಟದ ದಿನಗಳನ್ನು ನೆನೆಸಿಕೊಂಡರು.

ಡಾ. ಎಂ. ತಿಮ್ಮಪ್ಪ ರೈಯವರು ಸಂಘಕ್ಕೆ ಸಲ್ಲಿಸಿರುವ ಸೇವೆಯನ್ನು ಹಾಗೂ ಸಂಘದ ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರದ ನಿರ್ಮಾಣ ಕಾರ್ಯದಲ್ಲಿ ಶ್ರೀಯುತರ ಕೊಡುಗೆ ಹಾಗೂ ಶ್ರಮವನ್ನು ಎಲ್ಲರೂ ಶ್ಲಾಘಿಸಿದರು.

ಸಂಘದ ಅಧ್ಯಕ್ಷರಾದ ಶ್ರೀ ಎಂ. ಮುರಲೀಧರ ಹೆಗ್ಡೆಯವರು ದಿ| ರೈರ ಬಗ್ಗೆ ಮಾತನಾಡುತ್ತಾ ಶ್ರೀಯುತರ ಸೇವೆಯನ್ನು ಸ್ಮರಿಸಿದರು.

ಡಾ. ಎಂ. ತಿಮ್ಮಪ್ಪ ರೈಯವರ ಆತ್ಮ ಸದ್ಗತಿಯ ಬಗ್ಗೆ ಒಂದು ನಿಮಿಷದ ಮೌನ ಪ್ರಾರ್ಥನೆ ಹಾಗೂ ಅವರ ಭಾವಚಿತ್ರಕ್ಕೆ ಪುಷ್ಪನಮನದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

## *Congratulations*



**Ms. Varna D. Shetty** D/o Divakara M. Shetty and Sridevi D. Shetty has won the best actor award, for the role Ambika in the nataka Ashadada Ondhu Dina in RANGASOURABHA a state level theatre fest conducted in Ravindra Kalashetra on Feb 11th . Bunts Sangha Bangalore wishes her all the best for her future.

# Gender Equality – A Myth or Reality



Dr. Meera Krishnappa

